ದಿನಾಂಕಃ 29-01-2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ. ಎಸ್ ಆರ್ ಬಿ ವಕೀಲರಿಂದ

ನಿಮಗೆ ಕನ್ನಡ ಓದಲು ಬೆಯಲು ಬರುತ್ತದೆ ಎಂದರೆ ಕನ್ನಡ ಮಾತನಾಡುತ್ತೇನೆ. ನೀವು ಮಾರಾಟ ಮಾಡಿರುವ ಎಲ್ಲಾ ಅಸ್ತಿಗಳಿಗೂ ನೀವು ಸಹಿ ಮಾಡಿರುತ್ತೀರಾ ಎಂದರೆ ಮಾಡಿರುತ್ತೇನೆ. ಸರ್ವೆ ನಂ. 26 ಇನಾಂಮ್ತಿ ಜಮೀನು ಎಂದರೆ ಸರಿ. ಆ ಆಸ್ತಿಯನ್ನು ನೀವು ಸುಮಾರು ಜನಕ್ಕೆ ಮಾರಾಟ ಮಾಡಿರುತ್ತೀರಿ ಎಂದರೆ ಸಾಕ್ಷಿಯು ವೆಂಕಟಸ್ವಾಮಿ ರವರಿಗೆ ಬಿಟ್ಟು ಬೇಯವರಿಗೆ ಮಾರಾಟ ಮಾಡಿರುವುದಿಲ್ಲ. ಇದೇ ಸರ್ವೆ ನಂಬರ್ ಪೈಕಿ ದಿಃ12-4-2006 ರಲ್ಲಿ ಆದಿಲೆಕ್ಷ್ಮಮ್ಮ ನವರಿಗೆ 10 ಗುಂಟೆ ಜಮೀನನ್ನು ಮಾರಾಟ ಮಾಡಿರುತ್ತೀರಿ ಎಂದರೆ ಜ್ಞಾಪಕವಿರುವುದಿಲ್ಲ. ನೀವು ನಿಮ್ಮ ತಂದೆ ನಿಮ್ಮ ಅಣ್ಣ ತಮ್ಮಂದಿರು ಎಲ್ಲಾ ಸೇರಿ ದಿಃ12-4-2006 ರಲ್ಲಿ 10 ಗುಂಟೆ ಜಮೀನು ಮಾರಾಟ ಮಾಡಿರುತ್ತೀರಾ ಎಂದರೆ ಮಾರಾಟ ಮಾಡಿರುತ್ತಾರೆ ನಾನು ಸಹಿ ಹಾಕಿರುತ್ತೇನೆ. ವೆಂಕಟಸ್ವಾಮಿ ರವರಿಗೆ ಮಾರಾಟ ಮಾಡಿರುವ ಜಮೀನು ಗುರುತಿಸಲು ಆಗುತ್ತದೆ. ಅದರ ಚೆಕ್ಕುಬಂದಿ ಪೂರ್ವಕ್ಕೆ ಮುನಿನಾರಾಯಣಪ್ಪ, ಪಶ್ಚಿಮಕ್ಕೆ ಮುನಿವೆಂಕಟಪ್ಪ ಉತ್ತರಕ್ಕೆ ಅನಿಲ್ ದಕ್ಷಿಣಕ್ಕೆ ರಸ್ತೆ. ಉತ್ತರಕ್ಕೆ ಇರುವ ಅನಿಲ್ ರವರಿಗೆ ನೀವೇ ಆಸ್ತಿಯನ್ನು ಮಾರಾಟ ಮಾಡಿರುತ್ತೀರಿ ಎಂದರೆ ಅದು ನಮಗೆ ಸಂಬಂಧ ಇರುವುದಿಲ್ಲ. ದಾವಾ ಆಸ್ತಿಯ ಉತ್ತರಕ್ಕೆ ಇರುವ ಅನಿಲ್ ರವರು ಆಸ್ತಿಯನ್ನು ಬೇರೆಯವರಿಗೆ ಮಾರಾಟ ಮಾಡಿರುತ್ತಾರೆ. ಅದರಲ್ಲಿ ವಾದಿಯರು ಪಾಯ ಅಗೆದಿರುತ್ತಾರೆ. ಪಾಯ ಅಗೆದಿರುವುದನ್ನು ನಾನು ನೋಡಿರುತ್ತೇನೆ. ಪಾಯ ಅನಿಲ್ ರವರ ಆಸ್ತಿ ಪಕ್ಕದಲ್ಲಿ ಇಲ್ಲ ಎಂದರೆ ಸರಿಯಲ್ಲ. ಆದಿಲಕ್ಷ್ಮಮ್ಮನಿಗೆ ಮಾರಾಟ ಮಾಡಿದ ಆಸ್ತಿಗೂ ಅನಿಲ್ ರವರ ಆಸ್ತಿಗೂ ಸಂಬಂಧ ಇರುವುದಿಲ್ಲ. ಆದಿಲಕ್ಷ್ಮಮ್ಮನಿಗೆ ಮರಾಟ ಮಾಡಿರುವ ಆಸ್ತಿಯನ್ನು ಗುರುತಿಸುತ್ತೇನೆ. ಆದಿಲಕ್ಷ್ಮಮ್ಮನ ಆಸ್ತಿಯ ಸುತ್ತಲೂ ಮುಳ್ಳು ಕಂಬಿ ಹಾಕಿರುತ್ತಾರೆ ಎಂದರೆ ಅಂತಹದ್ದು ಯಾವುದೂ ಇರುವುದಿಲ್ಲ. ವಾದಿ ಪಾಯ ಹಾಕಿರುತ್ತಾರೆ ಅಂತ ಹೇಳಿರುತ್ತಿರುವ ಜಾಗ ಅನಿಲ್ ರವರ ಆಸ್ತಿ ಪಕ್ಕದಲ್ಲಿ ಬರುವುದಿಲ್ಲ ಎಂದರೆ ಸರಿಯಲ್ಲ.

ಭಾಗ್ಯಲಕ್ಷ್ಮಿ ರವರಿಂದ ಪ್ರತಿವಾದಿಯರು ಆಸ್ತಿಯನ್ನು ಖರೀದಿ ಮಾಡಿರುತ್ತಾರೆ ಎಂದರೆ ಗೊತ್ತಿರುವುದಿಲ್ಲ. ಪ್ರತಿವಾದಿಯ ಆಸ್ತಿಯಲ್ಲಿ ವಾದಿಗಳು ಬಂದು ಪ್ರತಿವಾದಿಗಳಿಗೆ ತೊಂದರೆ ಕೊಡುತ್ತಿದ್ದಾರೆ ಎಂದರೆ ಇಲ್ಲ. ಅವರ ಆಸ್ತಿಗೂ ಇವರ ಆಸ್ತಿಗೂ ಸಂಬಂಧ ಇರುವುದಿಲ್ಲ. ವೆಂಕಟಸ್ವಾಮಿ ರವರಿಗೆ ಮಾರಾಟ ಮಾಡುವಾಗ ಸ್ಕೆಚ್ ಮಾಡಿಸಿರುವುದಿಲ್ಲ ಪೂ-ಪ 33 , ಉತ್ತರ ದಕ್ಷಿಣ 33 ಅಡಿ ಮಾರಾಟ ಮಾಡಿರುತ್ತೇವೆ. ನಿಮ್ಮ ಪತ್ರದಲ್ಲಿ 33 ಇಂಟು 33 ಅಡಿ ಬರೆದಿದೆಯಾ ಎಂದರೆ ಬಂದಿದೆ. ನೀವು ಹೇಳಿದಂತೆ ವಾದಿಗಳು ಯಾವುದೇ ಜಮೀನಿನಲ್ಲಿ ಸ್ವಾಧೀನ ಇರುವುದಿಲ್ಲ ಹಣದ ಆಮಿಷ ಹೊಡ್ಡಿ ನಿಮ್ಮನ್ನು ಸಾಕ್ಷ್ಯ ಹೇಳಲು ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. ವಾದಿ ಜಾಗ ಅಂತ ಹೇಳಿದ ಎಲ್ಲಾ ಜಾಗವೂ ಖಾಲಿ ಇದೆ ಎಂದರೆ ಖಾಲಿ ಇದೆ, ವಾದಿ ಪಾಯ ಹಾಕಿರುತ್ತಾರೆ. ವಾದಿಯರು ಅಲ್ಲಿ ಯಾವುದೇ ಪಾಯ ಹಾಕಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.